(ಶ್ರೀ ವೀರೇಂದ್ರ ಪಾಟೀಲ್)

ಹೋಗಿದೆ ಎಂದು ನನಗನ್ನಿಸುತ್ತದೆ. ಈಗಾಗಲೇ ಸಾಕಷ್ಟು ಸಮಯ ಹೋಗಿದೆ. ಇದರಲ್ಲಿ ನಮಗೆ ಕಷ್ಟ ಏನಾಗುತ್ತದೆ ಎಂದರೆ, ಇದಕ್ಕೆ ಬೇಕಾಗುವ ಹಣವನ್ನು ಒದಗಿಸಿದರೂ ಲ್ಯಾಂಡ್ ಅಕ್ವಿಸಿಷನ್ ಬಹಳ ತೊಡಕಿನ ರೀತಿಯಲ್ಲಿರುವುದರಿಂದ ನಿಧಾನವಾಗಿದೆ. ಎಷ್ಟಾದರೂ 27 ವರ್ಷ ತೆಗೆದುಕೊಳ್ಳಬಾರದು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು.—ಯಾವ ವರ್ಷದಲ್ಲಿ ಸಬಮರ್ಜ ಆಯಿತು?

ಶ್ರೀ ವೀರೇಂದ್ರ ಪಾಟೀಲ್.—ಆ ಲೆಕ್ಕದಿಂದ ತೆಗೆದುಕೊಂಡರೆ 1939-40 ಬರುತ್ತದೆ. ಬಹುತಃ 2-3 ವರ್ಷದ ನಂತರ ಕಾರ್ಯಕ್ರಮ ತೆಗೆದುಕೊಂಡಿರುತ್ತಾರೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ಇಂತಹ ಕೇಸುಗಳು ಅನೇಕ ಇವೆ. 20-30 ವರ್ಷಗಳ ಹಿಂದೆ ರಸ್ತೆ, ಕೆರೆ, ಇಂಥವುಗಳಿಗೆ ತೆಗೆದುಕೊಂಡ ಜಮೀನುಗಳಿಗೆ ಪರಿಹಾರವನ್ನು ಕೊಡದೆ ಇರುವುದಲ್ಲದೆ ಕಂದಾಯವನ್ನು ಕೂಡ ವಸೂಲು ಮಾಡಿದ್ದಾರೆ. ಈ ಅನ್ಯಾಯ ಅನೇಕ ಕಡೆ ನಡೆದಿದೆ. ಇದನ್ನು ಆದಷ್ಟು ಬೇಗ ಸರಿಪಡಿಸಬೇಕು.

Mr. SPEAKER.—This matter covered by this interpellation should be disposed of early.

ಶ್ರೀ ಎಸ್. ನಿಜಲಿಂಗಪ್ಪ.—ಇನ್ನು ಆರು ತಿಂಗಳೊಳಗಾಗಿ ಬಗೆಹರಿಸುತ್ತೇವೆ. ಈ ರೀತಿ ನಿಧಾನವಾಗಿರುವುದು ನಿಜ. ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ 20-30 ವರ್ಷಗಳಿಂದ ನಡೆದಿದೆ. ಇಂಥದನ್ನೆಲ್ಲ ಸರಿಪಡಿಸಬೇಕೆಂದು ಸರ್ಕಾರದ ಆಜ್ಞೆಯಾಗಿದೆ. ಒಂದೊಂದಾಗಿ ಸರಿಪಡಿಸುತ್ತಿದ್ದಾರೆ.

Steps taken to prevent post Devaluation Price Rise.

*Q.—38. Sri A. KRISHNA SHETTY (Mangalore-II).—

Will the Chief Minister be pleased to state :—

the steps taken by the Government to prevent post devaluation price rise in essential commodities ?

A.—Sri S. NIJALINGAPPA (Chief Minister).—By issue of orders controlling and/or regulating prices wherever necessary.

ಶ್ರೀ ಎ. ಕೃಷ್ಣ ಶೆಟ್ಟಿ.—ಬೆಲೆ ಏರಿಕೆಯನ್ನು ತಡೆಗಟ್ಟಲು ಸರ್ಕಾರದವರು 50 ಸಾವಿರ ಜನಸಂಖ್ಯೆಗಿಂತ ಹೆಚ್ಚಾಗಿರುವ ಪ್ರದೇಶಗಳಲ್ಲಿ ಜೀವನಾವಶ್ಯಕ ವಸ್ತುಗಳ ಮಾರಾಟ ಮಾಡಲು ಅಂಗಡಿಗಳನ್ನು ತೆರೆದು ಬೆಲೆಗಳನ್ನು ಕಡಮೆ ಮಾಡುವುದರ ಜೊತೆಗೆ ರೈತರಿಗೆ ಕಡಿಮೆ ಬೆಲೆಯಲ್ಲಿ ವಸ್ತುಗಳನ್ನು ಒದಗಿಸುವ ದೆಸೆಯಲ್ಲಿ ನಮ್ಮ ಸರ್ಕಾರ ಏನು ಕೆಲಸ ಮಾಡಿದೆ, ಸ್ವಾಮಿ ?

† ಶ್ರೀ ಎಸ್. ನಿಜಲಿಂಗಪ್ಪ.—ರೂಪಾಯಿ ಬೆಲೆಯು ಕಡಿಮೆಯಾದುದರಿಂದ ಅದರ ಪರಿಣಾಮ ಪಟ್ಟಣಗಳಲ್ಲಿ ಜಾಸ್ತಿಯಾಯಿತು. ಹಳ್ಳಿಗಳಲ್ಲಿ ಪರದೇಶಗಳಿಂದ ತರಿಸುವ ಮಾಲುಗಳನ್ನು ಹೆಚ್ಚಾಗಿ ಉಪಯೋಗಿಸುವುದಿಲ್ಲ. 50 ಸಾವಿರ ಜನಸಂಖ್ಯೆ ಮತ್ತು ಅದಕ್ಕೆ ಮೇಲ್ಪಟ್ಟು ಇರುವ ಪಟ್ಟಣಗಳಲ್ಲಿ ಏನು ಪರಿಣಾಮವಾಗಿದೆ ಅದನ್ನು ತಡೆಗಟ್ಟುವುದಕ್ಕೆ ಪ್ರಯತ್ನಗಳು ನಡೆದಿವೆ. ಸಾಧಾರಣವಾಗಿ ಸೀಮೆ ಎಣ್ಣೆ, ಹೈಸ್ಪೀಡ್ ಡೀಸೆಲ್, ಲೋಸ್ಪೀಡ್, ಡೀಸೆಲ್, ವೆಜಿಟೆಬಲ್ ಆಯಿಲ್ಸ್, ಜೆಕ್ಸ್‌ಟೈಲ್ಸ್, ಬೇಬಿಫುಡ್ಸ್, ಸೋಪ್ಸ್, ಸೈಕಲ್ ಟೈರ್ಸ್ ಮತ್ತು ಟ್ಯೂಬ್ಸ್, ಪೇಪರ್, ಸ್ಟೇಷನರಿ ಇವು ಹೊರಗಡೆಯಿಂದ ಬಂದು ಅವುಗಳ ಮೌಲ್ಯವು ವ್ಯೆಪರೀತ್ಯಕ್ಕೆ ಹೋಗಿ, ಅವುಗಳ ಬೆಲೆಗಳನ್ನು ಕಡಮೆ ಮಾಡಬೇಕು ಎನ್ನುವುದಕ್ಕೆ ಸಾಕಷ್ಟು ಮಾರ್ಗಗಳನ್ನು ಅನುಸರಿಸಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅನೇಕ ಸಂದರ್ಭಗಳಲ್ಲಿ ಆಹಾರ ಮತ್ತ ಇತರ ಅವಶ್ಯಕ ವಸ್ತುಗಳ ವಿಷಯದಲ್ಲಿ ನಮ್ಮಲ್ಲಿ ಸಾಕಷ್ಟು ದಾಸ್ತಾನು ಇಲ್ಲ ನಾವು ಕಷ್ಟ ಪರಿಸ್ಥಿತಿಯಲ್ಲಿದ್ದೇವೆ, ದೇಶಕ್ಕೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿ ಜನರಿಗೆ ತೊಂದರೆಯನ್ನುಂಟುಮಾಡುವುದನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ!

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕೆ ಉತ್ತರ ಅವಶ್ಯಕವಿಲ್ಲ, ಸ್ವಾಮಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬರೀ ಭಾಷಣಗಳನ್ನು ಮಾಡುವುದು ಅಥವಾ ಹೇಳಿಕೆಗಳನ್ನು ಕೊಡುವುದಕ್ಕೆ ಬದಲು ಜನಗಳಿಗೆ ಉಂಟಾಗುವ ತೊಂದರೆಯನ್ನು ಕಡಮೆ ಮಾಡಲು ಕಾರ್ಯತಃ ಪ್ರಯತ್ನ ಮಾಡುತ್ತಾರೆಯೇ, ಸ್ವಾಮಿ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಯೋಚನೆ ಮಾಡದೆ ಪ್ರಶ್ನೆ ಕೇಳಿದ್ದರೆಂದು ಕಾಣುತ್ತದೆ. ರೂಪಾಯಿಯ ಬೆಲೆ ಕಡಮೆಯಾದುದರಿಂದ ಆಗತಕ್ಕ ಪರಿಣಾಮಕ್ಕೆ ಏನು ಮಾಡಿದ್ದೀರಿ ಎಂದು ಕೇಳಿರುವ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದೆ. ಯಾರೋ ಹೇಳಿಕೆ ಕೊಟ್ಟರು, ಅದರ ವಿಚಾರವೇನು ಎಂದರೆ ಏನು ಹೇಳುವುದಕ್ಕೆ ಆಗುತ್ತದೆ ?

ಶ್ರೀ ಸಿದ್ದಯ್ಯ ಕಾಶಿಮಠ.—ಪರದೇಶದಿಂದ ಬಂದಿರುವ ಮೈಲೋ, ಗೋಧಿ, ಇವುಗಳ ಬೆಲೆಯನ್ನು ಕ್ವಿಂಟಾಲಿಗೆ ಐದು ರೂಪಾಯಿ ಹೆಚ್ಚು ಮಾಡಿದ್ದಾರೆ. ಇದನ್ನು ಕಡಮೆ ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ನಿಜಲಿಂಗಪ್ಪ.—ಕಡಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ಈಗ ಏನು ಸ್ವಲ್ಪ ಜಾಸ್ತಿ ಮಾಡಿದ್ದಾರೆ ಅದೇ ಕಡಮೆಯಾಗಿದೆ ಎಂದು ಹೇಳಬೇಕಾಗುತ್ತದೆ.

Sri G. V. GOWDA.—May I know whether Government have issued any orders so far to regulate the prices of essential commodities ?

ಶ್ರೀ ಎಸ್. ನಿಜಲಿಂಗಪ್ಪ.—ಕೆಲವನ್ನು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಕೆಲವನ್ನು ನಾವು ತೀರ್ಮಾನ ಮಾಡಿದ್ದೇವೆ ಮತ್ತು ಕೆಲವರ ಬಗ್ಗೆ ಪುಕಾರು ಬಂದಿರುವುದರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ಸರ್ಕಾರ ಪರ್ಯಾಲೋಚಿಸುತ್ತಿದೆ.

ಶ್ರೀ ಎ. ಕೃಷ್ಣಶೆಟ್ಟಿ.—ಈಗ ಕೆಲವು ಸಾಮಗ್ರಿಗಳ ಮಟ್ಟಿಗೆ ಪೂರೈಕೆ ಸರ್ಕಾರದವರಿಗೆ ಇದೆ. ಬೆಲೆ ಎಷ್ಟು ಎಂದು ಹೇಳುವ ಮಟ್ಟಿಗೆ, ಅದನ್ನು ಕಂಡುಹಿಡಿಯಲಿಕ್ಕೆ ಏನಾದರೂ ಸರ್ಕಾರ ಏರ್ಪಾಡನ್ನು ಮಾಡಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಈ ಪ್ರಶ್ನೆ ಬಹಳ ಅಸ್ಪಷ್ಟ ಆಯಿತು. ಕೆಲವು ಕಡೆ ಪುಕಾರು ಬಂದಿದೆ. ಡೀಸೆಲ್ ಆಯಿಲ್ ವಗೈರೆ ಸರಬರಾಜು ಪ್ರಮಾಣದಲ್ಲಿ ಜಾಸ್ತಿ ಮಾಡಬೇಕೆಂದು ಪುಕಾರುಗಳು ಬಂದು ಅದರ ಮೇಲೆ ಕೇಂದ್ರ ಸರ್ಕಾರಕ್ಕೆ ಬರೆದು ಜಾಸ್ತಿ ಮಾಡಿದ್ದೇವೆ. ಇದರಿಂದ ಹಾಹಾಕಾರ ಕಡಮೆಯಾಗಿ ಬೆಲೆಗಳು ಸಾಕಷ್ಟು ಹತೋಟಿಯಲ್ಲಿವೆ.

ಶ್ರೀ ಎಸ್. ಶಿವಪ್ಪ.—ಈಗ 50 ಸಾವಿರ ಜನರಿರುವ ಎಲ್ಲಾ ಊರುಗಳಲ್ಲೂ ಕೂಡ ಡೀಸಲ್ ಆಯಿಲ್, ಬೇಬಿ ಫುಡ್ ಮುಂತಾದ ಸಾಮಾನುಗಳು ದೊರೆಯುವಂತೆ ಇದುವರೆಗೆ ಎಷ್ಟು ಅಂಗಡಿಗಳನ್ನು ಸರಕಾರ ತೆರೆದಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಹೆಚ್ಚಾಗಿ ತೆರೆಯುವುದಕ್ಕಾಗುವುದಿಲ್ಲ, ಈಗಿರುವ ಅಂಗಡಿಗಳ ಮೂಲಕವೇ ಅವನ್ನು ಒದಗಿಸಬೇಕಾಗಿದೆ, ಅದರಿಂದ ಸ್ವಲ್ಪ ತಡವಾಗುತ್ತದೆ.

ಶ್ರೀ ಸಿ. ಜೆ. ಮುಕಣ್ಣಪ್ಪ.—10-15 ಸಾವಿರ ಜನಸಂಖ್ಯೆಯಿರುವ ಸ್ಥಳಗಳಲ್ಲಿ ಕನಸ್ಯೂಮರ್ಸ್ ಸ್ಟೋರ್ಸ್ ಕೂಡ ತೆರೆದು ಜನತೆಗೆ ಸರಿಯಾದ ಬೆಲೆಯಲ್ಲಿ ಬೇಕಾದ ಪದಾರ್ಥಗಳು ದೊರೆಯುವಂತೆ ಸಹ ಮಾಡಿಲ್ಲ. ಹೀಗಾದರೆ ಜನರಿಗೆ ಹೇಗೆ ಸೌಲಭ್ಯ ದೊರೆಯುತ್ತದೆ ?

ಶ್ರೀ ಎಸ್. ನಿಜಲಿಂಗಪ್ಪ.—ಸರಕಾರ ತನ್ನ ಕೈಲಾದಷ್ಟು ಪ್ರಯತ್ನಮಾಡುತ್ತಿದೆ, ಅದಕ್ಕೆ ಮಾನ್ಯ ಸದಸ್ಯರ ಸಹಕಾರ ಬೇಕು.

ಶ್ರೀ ಎ. ಕೃಷ್ಣಶೆಟ್ಟಿ.—ಬೆಲೆ ಏರದಂತೆ ಸರಕಾರ ಏನು ಕ್ರಮ ಕೈಕೊಂಡಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಹಾಲು ತರಕಾರಿ ಮುಂತಾದ ಪ್ರತಿ ಸಾಮಾನಿಗೂ ಬೆಲೆ ಏರಿಸುತ್ತಿದ್ದಾರೆ, ಅದಷ್ಟು ಅದನ್ನು ತಡೆಗಟ್ಟಬೇಕಾಗಿದೆ. ಅದಕ್ಕೆ ಪ್ರಯತ್ನವಿದೆ. ಇದರಿಂದ ಸ್ವಲ್ಪ ಬೆಲೆ ಹತೋಟಿಗೆ ಬಂದಿದೆ.